ಮುಗಿದು ಪ್ರಸ್ತದ ಸಮಯ ಬರುವ ಹೊತ್ತಿಗೆ ಜೋರು ಕಾಲು ನೋವು, ಜ್ವರ, ಬೆನ್ನಿನ ಮೂಳೆಯಲ್ಲಿ ಸೆಳೆತ ಬಂದು ಕಣ್ಣು ಕತ್ತಲಾಗಿತ್ತು.

ಕತ್ತಲ ಕೋಣೆಯ, ಹಳೆಕಾಲದ ಮಂಚದ ಮೇಲೆ ಸಿದ್ರಾಮನ ಹೆಸರ ಪಕ್ಕ ಅವಳ ಹೆಸರು ರಾರಾಜಿಸುತ್ತಿತ್ತು: ಶ್ರೀಮತಿ.

***

ಮಗ ಹುಟ್ಟಿದ್ದು ಶ್ರೀಮತಿಯ ತವರಲ್ಲೇ. ಆ ಬಾಣಂತನದಲ್ಲಿ ಶ್ರೀಮತಿ ಉಳಿಯುವುದೇ ಇಲ್ಲ ಅಂತ ಅಂದುಕೊಂಡಿದ್ದರು. ಅಷ್ಟು ಕೃಶಳಾಗಿದ್ದಳು, ಮಲಗಿದ್ದಲ್ಲೇ ಜೋಂಪು ಹತ್ತುತ್ತಿತ್ತು. ಮಗುವಿಗೆ ಹಾಲುಣಿಸುವುದೂ ಕಷ್ಟವಾಗಿತ್ತು. ಬಿಳಿಸೆರಗು ಇದ್ದ ಕಾರಣ ಅವಳು ತೀರಾ ನಾಜೂಕು ಅಂತ ಡಾಕ್ಟರ್ ಹೇಳಿದ್ದರು. ಮಗುವಷ್ಟೇ ಅಲ್ಲ, ಮಗುವಿನ ತಾಯನ್ನೂ ನೋಡಿಕೊಳ್ಳಬೇಕು ಅಂತ ಹೇಳಿ, ಶ್ರೀಮತಿಯನ್ನು ಅವಳಮ್ಮ ಸಿದ್ರಾಮನ ಜೊತೆ ಕಳಿಸಿ ಕೊಡಲೇ ಇಲ್ಲ. ಎಲೆಕ್ಟ್ರಿಸಿಟಿ ಬೋರ್ಡ್‌ನಲ್ಲಿ ಕೆಲಸಕ್ಕಿದ್ದ ಸಿದ್ರಾಮ ಒಂದೂವರೆ ವರ್ಷ ಶಿವಮೊಗ್ಗದಲ್ಲಿ ತನ್ನ ಅಡುಗೆ ತಾನೇ ಬೇಯಿಸಿಕೊಂಡ, ಹೆಂಡತಿಯನ್ನು ನೋಡಲೆಂದು ಊರಿಗೆ ಬರುತ್ತಿದ್ದರೂ ರಾತ್ರಿಯೆಲ್ಲ ಮಗು ಒಂದೇ ಸಮನೆ ಅಳುತ್ತಿತ್ತು, ಇಬ್ಬರೂ ಮಗುವಿನ ಅಕ್ಕಪಕ್ಕ ಮಲಗಿ ಮಗನನ್ನು ಸಂಭಾಳಿಸಲು ಪ್ರಯತ್ನಿಸುತ್ತಿದ್ದರು, ಶ್ರೀಮತಿ ಅವನ ಗಡ್ಡ ತೆಗೆಯದ ಕೆನ್ನೆಯನ್ನು ಸವರಿ, ಎಣ್ಣೆ ತಾಗಿಸದ ಕೂದಲನ್ನು ಕೆದಕಿ, ಮುದ್ದು ಮಾಡುತ್ತಿದ್ದಳು. ಅವನಿಗೂ ಅವಳ ಮೇಲೆ ಪ್ರೀತಿ, ಮುದ್ದು ಉಕ್ಕಿ ಬರುತ್ತಿತ್ತು.

ಆದರೂ ಅದೇನೋ, ಶ್ರೀಮತಿಯನ್ನು ಸುಖವಾಗಿಡದ ತನ್ನೊಂದು ಐಬು ತಮ್ಮಿಬ್ಬರ ಮಧ್ಯೆ ಮರೆಯುತ್ತಲೇ ಇರಬೇಕಾದ ಅನಿವಾರ್ಯವನ್ನು ನೆನೆದು ಸಿದ್ರಾಮ ಮತ್ತಷ್ಟು ಅಧೀರನಾಗುತ್ತಿದ್ದ. ತೋಟದ ಅಡ್ಡಾದಿಡ್ಡಿ ಮೆಟ್ಟಿಲ ಮೇಲೆ ತನ್ನ ಪ್ರೀತಿ, ಮೋಹಗಳನ್ನೆಲ್ಲ ಯಥೇಚ್ಛ ಉಣಬಡಿಸಿದ್ದ ತನಗೆ ತನ್ನ ಪ್ರೀತಿಯ ಹುಡುಗಿಯ ಮುಂದೆ ಅದೆಷ್ಟು ಅಶಕ್ತನಾಗುತ್ತಿದ್ದೇನೆ, ಸಣ್ಣವನಾಗುತ್ತಿದ್ದೇನೆ ಅಂತ ಯೋಚಿಸಿ ಇನ್ನೂ ಮನಸ್ಸು ಕುಗ್ಗುತ್ತಿತ್ತು. ಒಂದು ಥರದಲ್ಲಿ ಕಾಮ ದೇಹದ್ದಾಗಿರದೇ ಮನಸ್ಸಿನದ್ದಾಗಿತ್ತು, ಇಬ್ಬರ ನಡುವೆ ಅಡ್ಡಗೋಡೆಯನ್ನೇ ಕಟ್ಟಿತ್ತು.

ಆ ಸಲ ಶ್ರೀಮತಿ ಶಿವಮೊಗ್ಗಕ್ಕೆ ವಾಪಾಸ್ ಬರುವ ಹೊತ್ತಿಗೆ ಹೊಳಲ್ಕೆರೆಗೆ ಸಿದ್ರಾಮನಿಗೆ ವರ್ಗವಾಗಿತ್ತು. ಎಲ್ಲಕ್ಕೂ ಗಿಟಗಿಟನೆ ನಗುವ ಪುತ್ರರತ್ನದ ಜೊತೆ ಬಸ್ಸಿನಲ್ಲಿ ಹೊಳಲ್ಕೆರೆ ಹೋಗಿ ತಲುಪುವವರೆಗೂ ಶ್ರೀಮತಿಯೂ, ಸಿದ್ರಾಮರೂ ಆವರೆಗೆ ಕಳೆದುಕೊಂಡಿದ್ದ ಅದೆಷ್ಟೋ ಸಂತೋಷವನ್ನು ಕಣ್ಣೋಟದಲ್ಲೇ, ಬೆರಳ ಸ್ಪರ್ಶದಲ್ಲೇ ಉಂಡಿದ್ದರು. ಹೊಸ ಊರು, ಹೊಸ ಮನೆಗೆ ಹೋಗುತ್ತಲೇ, ಮಗ ನಿದ್ದೆ ಹೋದ. ಇಬ್ಬರೂ ಏಕಾಂತದ ರಾತ್ರಿಗೆ ಬೆಂಕಿ ಹಚ್ಚಿ ಆಗಸಕ್ಕೆ ಬಿಟ್ಟರು, ತನ್ನೆಲ್ಲ ಮೋಹವನ್ನೂ ಬಿಚ್ಚಿಬಿಟ್ಟ ಸಿದ್ರಾಮನ ಮಡಿಲಲ್ಲಿ ಶ್ರೀಮತಿ ಅರಳಿದಳು.

ಮಗಳು ಹುಟ್ಟಿದಾಗ ಮಗನಿಗಿನ್ನೂ ಮೂರೂವರೆ ವರ್ಷ. ಮಗನ ಬಾಣಂತನದಿಂದ ಕೊಂಚ ಚೇತರಿಸಿಕೊಂಡು ಕಳಕಳಿಯಾಗಿದ್ದ ಶ್ರೀಮತಿ ಮತ್ತೆ ಮಗಳನ್ನು ಧರಿಸಿಕೊಳ್ಳುವ ಹೊತ್ತಿಗೆ ಜೀವಚ್ಛವವಾಗಿದ್ದಳು. ಹೊಳಲ್ಕೆರೆಯ ಸರ್ಕಾರಿ ಆಸ್ಪತ್ರೆಯಲ್ಲಿ ಮೊಲೆ ಚೀಪುವ ಮಗಳ ಜೊತೆ ಪ್ರಜ್ಞೆ ಇಲ್ಲದೇ ಮಲಗಿದ್ದ ಶ್ರೀಮತಿಯನ್ನು ಕಂಡು, ಇನ್ನು ಇವೆಲ್ಲ ಸಾಕು, ತಾನಿನ್ನು ಇವಳನ್ನು ಉಳಿಸಿ ಕೊಳ್ಳಬೇಕು, ಈ ಪುಟ್ಟಪುಟ್ಟ ಕಣ್ಣುಗಳು ತನಗೋಸ್ಕರ ಉಳಿಯಬೇಕು ಅಂತ ಕಣ್ಣನ್ನು ಮುದ್ದಿಸಿದ.

ಅದೇ ಕೊನೆ, ಹೊಳಲ್ಕೆರೆಯಿಂದ ಮೂಡುಬಿದರೆ, ಅಲ್ಲಿಂದ ಹೆಬ್ರಿ, ಅಲ್ಲಿಂದ ಮತ್ತೊಂದು. ಹೀಗೆ ಮಕ್ಕಳಿಬ್ಬರೂ ಬೆಳೆದು, ಅವರವರ ಕೆಲಸ ಸೇರಿಕೊಳ್ಳುವ ಹೊತ್ತಿಗೆ ಶ್ರೀಮತಿಗೆ ಸಿದ್ರಾಮನೆಂದರೆ ತನ್ನಿಬ್ಬರು ಮಕ್ಕಳ ತಂದೆ, ಆಧಾರ್ ಕಾರ್ಡಲ್ಲಿ ಗಂಡನ ಹೆಸರು, ಅಪರಿಚಿತರಿಗೆ ಪರಿಚಯಿಸುವ ಒಂದು ಮುಖ್ಯಸಂಬಂಧ, ಕತ್ತಿನ ತಾಳಿ, ಕಾಲುಂಗುರಕ್ಕೂ ಗೊತ್ತಿಲ್ಲದ, ಮೈಗಂತೂ ನೆನಪೇ ಇಲ್ಲದ ಒಬ್ಬ ಸಹ ಪ್ರಯಾಣಿಕನಾಗಿ ಹೋಗಿದ್ದ.

ಪರಿಮಳ ಬರುವ ಮೇಲ್ವಸ್ತ್ರವಿರುವ ಗರಿಗರಿ ಹಾಸಿಗೆಯನ್ನು ಸಿದ್ರಾಮ ಸವರಿದ.

ಶ್ರೀಮತಿ ತನ್ನೆಲ್ಲ ವಸ್ತ್ರಗಳನ್ನೂ ಅದೆಷ್ಟು ವರ್ಷಗಳ ಕಾಲ ಉಜ್ಜಿ ಉಜ್ಜಿ ತೊಳೆಯುತ್ತಾ, ತನಗೆ ಅವಳ ಮೇಲೆ ಇರುವ ಅಸಮಾಧಾನವೋ, ನಿರಾಸಕ್ತಿಯೋ, ಅನ್ಯಮನಸ್ಕತೆಯೋ ಅದ್ಯಾವುದೇನನ್ನೋ ಹುಡುಕಿ ಹುಡುಕಿ ಬೇಸತ್ತಿರಬಹುದು ಅಂತ ಅನ್ನಿಸಿ, ಕಣ್ಣಂಚಲ್ಲಿ ನೀರು ಜಿನುಗಿತು. ಒಬ್ಬ ಗಂಡಸಿಗೆ ಹೆಂಡತಿ ಎದುರೂ ತನ್ನ ಐಬು ಬಿಚ್ಚಿಡುವುದು ಅದೆಂಥ ಅಹಂಭಾವದ ವಿಷಯವೋ ಅಂತ ಅನ್ನಿಸಿತು, ಆದರೆ ಒಮ್ಮೆ ಮನುಷ್ಯ ಅಹಂಭಾವವನ್ನು ಸಾಕತೊಡಗಿದರೆ ಸಾಕು, ಹೋಗುತ್ತಾ ಹೋಗುತ್ತಾ ಮನುಷ್ಯನನ್ನು ಅದೇ ಸಾಕುತ್ತದೆ, ಯಾರು ಯಾರನ್ನು ಸಾಕುತ್ತಿದ್ದಾರೆ ಅಂತ ಗೊತ್ತಾಗದೇ ಹೋಗುತ್ತದೆ.

***

ಹುಲಿ ಕತೆ ನಂತರ ಇದ್ದಕ್ಕಿದ್ದ ಹಾಗೇ ಅಪ್ಪ ಮೌನಿ ಆಗಿ ಹೋಗಿದ್ದನ್ನು ಮಗ ನಾಲ್ಕು ದಿನ ಕಳೆದ ಮೇಲೆ ಗಮನಿಸಿದ. ಬೆಳಿಗ್ಗೆ ವಾಕಿಂಗ್‌ಗೆ ಜೊತೆಗೇ ಹೊರಡುತ್ತಿದ್ದರೂ ಆಮೇಲೆ 'ನೀನು ಹೋಗು' ಅಂತ ಮಗನನ್ನು ಕಳಿಸಿ ಕೊಡತೊಡಗಿದ, 'ರಾಜಸ್ತಾನ್ ರಾಯಲ್ಸ್ ವರ್ಸಸ್ ಚೆನ್ನೈ ಸೂಪರ್ ಕಿಂಗ್ಸ್ ಮ್ಯಾಚು ನಿಮ್ಮ ಫೇವರೆಟ್, ಬನ್ನಿ' ಅಂತ ಕರೆದರೆ 'ತಲೆನೋವಪ್ಪ, ನೀನು ನೋಡ್ಕೋ' ಅಂತ ಮಗನನ್ನು ಸಾಗ ಹಾಕಿದ. ಊಟಕ್ಕೆ ಕೂತಾಗ ಮಾತು ಕಮ್ಮಿ, ಏನಾಯ್ತೆಂದು ಗೊತ್ತಿಲ್ಲದೇ ಮಗ ಕಂಗಾಲಾದ. ಆವತ್ತು ಕರೆಂಟು ಹೋದ ರಾತ್ರಿ ಅಪ್ಪ ಅದೇನೋ ಹೇಳಿದ್ರಲ್ಲ ಅಂತ ಜ್ಞಾಪಿಸಿಕೊಳ್ಳಲು ನೋಡಿದ, ಗಂಭೀರವಾದ್ದೇನೂ ನೆನಪಾಗಲೇ ಇಲ್ಲ.

ಆ ಸಲ ರೆಗ್ಯುಲರ್ ಚೆಕಪ್‌ಗೆ ಅಪ್ಪನನ್ನು ತಾನೇ ಬೈದು ಕರೆದುಕೊಂಡು ಹೋದಾಗ ಡಾಕ್ಟರ್ ಹತ್ತಿರ 'ಏನೋ ಸಮಸ್ಯೆ ಇರೋ ಹಾಗಿದೆ, ಕೌನ್ಸಿಲರ್ ಹತ್ತಿರ ಕರೆದೊಯ್ಯಲಾ' ಅಂತ ಕೇಳಿ ನೋಡಿದ. ಡಾಕ್ಟರ್ ಅಪ್ಪನನ್ನು ಆಚೆ ಕಳಿಸಿ, ಮಗನನ್ನಷ್ಟೇ ಕೂರಿಸಿಕೊಂಡು, 'ಎಲುಬುಗಳು ಸವೆಯುತ್ತಿವೆ, ಯಾವಾಗನಿಂದಲೇ ಅವರಿಗೆ ನೀ ಪ್ರಾಬ್ಲಮ್ ಇತ್ತು, ಸರಿಯಾಗಿ ತೋರಿಸಿಕೊಂಡಿಲ್ಲ, ಒಂದು ಮಂಡಿಯ ಚಿಪ್ಪೇ ಎಗರಿ ಹೋಗಿದೆ, ಈಗ ನೀ ರಿಪ್ಲೇಸ್‌ಮೆಂಟ್ ಸ್ವಲ್ಪ ಕಷ್ಟ, ಏನು ಮಾಡಬೇಕು ಅಂತ ನೀವೇ ಹೇಳಿ' ಅಂತ ಕಳಿಸಿಕೊಟ್ಟರು.

ಡಾಕ್ಟರ್ ಕ್ಯೂಬಿಕಲ್‌ನಿಂದ ಹೊರಗಡೆ ಬರುತ್ತಲೇ ಮೊಣಕಾಲು ನೀವಿಕೊಳ್ಳುತ್ತಾ ಕುಳಿತ ಅಪ್ಪ ಕಂಡರು, ಕೂಡಲೇ ಎರಗಿದ ಹುಲಿಯ ಕತೆ ಹೇಳುತ್ತಿದ್ದ ನೆನಪಾಯಿತು, ನೀ ಪ್ರಾಬ್ಲಮ್ಮು ಅಂತ ಡಾಕ್ಟರ್ ಹೇಳಿದ್ದು ಕಿವಿಯಲ್ಲಿ ಪ್ರತಿಧ್ವನಿಸಿತು. ವ್ಯಾಧಿ ಮಗನಿಗೆ ವರ್ಗಾವಣೆಯಾಯಿತು.

***

ಸಿದ್ರಾಮನ ಮಗಳ ಹೆಸರು ವೈಷ್ಣವಿ. ಮೆಕಾನಿಕಲ್ ಎಂಜಿನಿಯರಿಂಗ್ ಓದಬೇಕೆಂದು ಬಹಳ ಆಸೆ ಪಟ್ಟಿದ್ದಳು. ಆದರೆ ಡಾಕ್ಟರ್ ಓದು ಅಂತ ಅಪ್ಪನ ಒಂದೇ ಹಠ. ತರಿಸುವ ಕನ್ನಡ ಮತ್ತು ಇಂಗ್ಲಿಷ್ ಪೇಪರ್‌ಗಳಲ್ಲಿ ಸಿದ್ರಾಮನಿಗೆ ದಿನಕ್ಕೊಂದು ಹೊಸ ವಿಷಯ ಸಿಗುತ್ತಿತ್ತು. ಯಾವ ಡಾಕ್ಟರ್‌ಗೆ ಎಲ್ಲಿ ಡಿಮಾಂಡ್ ಉಂಟು ಅಂತ ಹುಡುಕಿ ಹುಡುಕಿ ಮಗಳ ಕಿವಿಗೆ ತುಂಬುತ್ತಿದ್ದ. ಒಂದು ದಿನ ಅವಳಿಗೆ ಚೆನ್ನಾಗಿ ನೆನಪಿದೆ, ಬ್ರಿಟನ್‌ಗೆ ಹೋದ ಒಬ್ಬ ಡಾಕ್ಟರ್ ವಾಪಾಸ್ ಚೆನ್ನೈಗೆ ಬಂದು, ಊರಲ್ಲಿ ಕ್ಲಿನಿಕ್ಕು ತೆಗೆದು, ಆಮೇಲೆ ಹೇಗೆ ಜನಪ್ರಿಯ ಆರ್ಥೋಪೆಡಿಕ್ಸ್ ಸರ್ಜನ್ ಆದ, ಅವನದೇ ಆಸ್ಪತ್ರೆ ತೆರೆದ ಅಂತ ಲೇಖನ ಓದಿ, ಮಗಳನ್ನು ಹುರಿದುಂಬಿಸಿದ್ದ. 'ಅದ್ಯಾಕೆ ಅವಳ ಮೇಲೆ ಅಷ್ಟೊಂದು ಒತ್ತಡ ತರುತ್ತೀರಿ, ಅವಳಿಗೆ ಮೆಕಾನಿಕಲ್ ಎಂಜಿನಿಯರ್ ಆಗೋ ಆಸೆ ಉಂಟು, ಅದಕ್ಕೇಕೆ ಕಲ್ಲು ಹಾಕುತ್ತೀರಿ' ಅಂತ ಶ್ರೀಮತಿ ಬೈದ ಮೇಲೆ ಮತ್ತೆ ಒತ್ತಾಯಿಸುವ ಗೋಜಿಗೆ ಹೋಗಲಿಲ್ಲ. ಹಾಗೆ ವೈಷ್ಣವಿ ತನ್ನದೇ ಕರಿಯರ್ ನೋಡಿಕೊಂಡಳು.

ಅವಳಣ್ಣ ಹೇಳಿದ ಹುಲಿಯ ಕತೆ ಕೇಳಿ, ವೈಷ್ಣವಿ ಸಿಕ್ಕಾಪಟ್ಟೆ ನಕ್ಕಳು. 'ಅಜ್ಜನ ಊರಲ್ಲಿ ಅಪ್ಪ ಬೆಳೆದಿರೋದು ನಿಜ, ಹುಲಿಗಿಲಿ ಇದ್ದರೂ ಇರಬಹುದು. ಹಾಗಂತ ಅಪ್ಪನ ಮೇಲೆ ಆ

